# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :14 ಪ್ರಾ.ಸಾ. : 11**

| | | |
|---|---|---|
| ಸಾಕ್ಷಿಯ ಹೆಸರು | : | ಅಂಕುಶ್ ಸಚಿನ್ ನಾಯಕ್ |
| ತಂದೆಯ ಹೆಸರು | : | ಸಚಿನ್ ನಾಯಕ್ |
| ವಯಸ್ಸು | : | 14 ವರ್ಷ |
| ಕೆಲಸ | : | ವಿದ್ಯಾರ್ಥಿ |
| ವಾಸ | : | ಬಾವಿಕೇರಿ, ಅಂಕೋಲ |

**ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ತಾಯಿ, ಚಾಸಾ-7 ನನ್ನ ತಂದೆ, ಚಾಸಾ-4 ನನ್ನ ಅಜ್ಜಿ, ಚಾಸಾ-5 ನನ್ನ ಚಿಕ್ಕಪ್ಪ, ಚಾಸಾ-6 ನನ್ನ ಚಿಕ್ಕಮ್ಮ, ನಮ್ಮ ಮನೆ ಹಾಗೂ ನಮ್ಮ ಚಿಕ್ಕಪ್ಪ ಅಕ್ಕಪಕ್ಕದ ಮನೆಯಲ್ಲಿ ವಾಸ ಮಾಡುತ್ತೇವೆ. ನನ್ನ ಅಜ್ಜಿ ನನ್ನ ಚಿಕ್ಕಪ್ಪನ ಮನೆಯಲ್ಲಿ ವಾಸ ಮಾಡುತ್ತಾರೆ. ಚಾಸಾ-8 ರಿಂದ 13 ರವರು ನಮ್ಮ ಕೇರಿಯವರು. ಆರೋಪಿಯು ನನ್ನ ತಂದೆಯ ಸ್ನೇಹಿತ. ನನ್ನ ತಂದೆ ಸೀ ಬರ್ಡ್ ನಲ್ಲಿ ಕೆಲಸ ಮಾಡುತ್ತಿದ್ದು, ದಿ.23-01-2017 ರಂದು ನನ್ನ ತಂದೆ ರಾತ್ರಿ ಪಾಳಿ ಕೆಲಸಕ್ಕೆ 8.00 ಗಂಟೆಗೆ ಹೋಗಿದ್ದು, ಆ ದಿನ ನನ್ನ ಅಜ್ಜಿ ನಮ್ಮ ಮನೆಗೆ ಬಂದು, ಮನೆಯ ಹಾಲ್ ನಲ್ಲಿ ಮಲಗಿದ್ದರು. ನಾನು ಹಾಗೂ ನನ್ನ ತಾಯಿ ಬೆಡ್ ರೂಮಿನಲ್ಲಿ ಮಲಗಿದ್ದೆವು. ಅದೇ ದಿನ ಮಧ್ಯ ರಾತ್ರಿ 1.00 ಗಂಟೆಗೆ ನಮ್ಮ ಮನೆಯ ಹಿಂದಿನ ಬಾಗಿಲನ್ನು ಯಾರೋ ಬಡಿದ ಶಬ್ಧ ಕೇಳಿ ಬಂದಿದ್ದು, ನನ್ನ ತಾಯಿ ಹಾಗೂ ನನ್ನ ಅಜ್ಜಿ ಮನೆಯ ಬಾಗಿಲನ್ನು ತೆಗೆದು ನೋಡಿದಾಗ,

ಮನೆಯ ಬಾಗಿಲು ಬಡಿದ ವ್ಯಕ್ತಿಯು ನನ್ನ ತಂದೆಯ ಸ್ನೇಹಿತ ಆರೋಪಿಯಾಗಿದ್ದನು. ಆಗ ನನ್ನ ತಾಯಿ ಆತನಿಗೆ ಯಾಕೆ ಇಲ್ಲಿ ಬಂದೆ ಎಂದು ಕೇಳಿದಾಗ, ಆತ ನನ್ನ ತಾಯಿಯನ್ನು ದೂಡಿಕೊಂಡು ಮನೆಯ ಒಳಗೆ ಬಂದು, ನನ್ನ ತಾಯಿಯನ್ನು ಹಿಡಿದುಕೊಂಡು ಎಳೆದಾಡಿದ, ಆಗ ನಾವೆಲ್ಲರೂ ಬೊಬ್ಬೆ ಹಾಕಿ, ಮನೆಯ ಹೊರಗೆ ಓಡಿ ಬಂದೆವು ಹಾಗೂ ಆತನನ್ನು ಮನೆಯ ಒಳಗೆ ಕೂಡಿ ಹಾಕಿದೆವು. ನಾವು ಬೊಬ್ಬೆ ಹಾಕಿದ್ದರಿಂದ ನಮ್ಮ ಕೇರಿಯ ಜನರು ಮತ್ತು ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಬಂದರು ಮತ್ತು ನನ್ನ ತಂದೆ ಕೆಲಸ ಮುಗಿಸಿ, ಬೆಳಿಗ್ಗೆ ಮನೆಗೆ ಬಂದಿದ್ದು, ನಂತರ ಎಲ್ಲರೂ ಸೇರಿ, ಆರೋಪಿಯನ್ನು ಹಿಡಿದುಕೊಂಡಿದ್ದು, ನನ್ನ ತಾಯಿಯು ಆರೋಪಿಯ ವಿರುದ್ಧ ಠಾಣೆಯಲ್ಲಿ ನೀಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ